Reg. No. | | | | | | | | | | | | |

**BSCKALN 202**

**II Semester B.Sc. Examination, July/August 2023**
**(NEP-2020) (2022-23 Batch Onwards)**
**KANNADA LANGUAGE (AECC)**

Time : 2 Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರಿಸಿ : **(2×8=16)**

1) ''ಉಮರನ ಒಸಗೆ ಚೌಪದಿ''ಗಳ ಸ್ವಾರಸ್ಯವನ್ನು ವಿವರಿಸಿ.

2) ''ಚಿಟ್ಟೆ ಮತ್ತು ಮೇಷ್ಟು'' ಕವಿತೆಯ ಆಶಯವನ್ನು ಬರೆಯಿರಿ.

3) ಗುತ್ತಿಯ ಪಾತ್ರವನ್ನು ಪರಿಚಯಿಸಿರಿ.

4) ಭಾರತೀಯ ವಿಜ್ಞಾನಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿರಿ.

II. ಎರಡು ಪ್ರಶ್ನೆಗಳಿಗೆ ಉತ್ತರಿಸಿ : **(2×6=12)**

1) ಭರತ-ಬಾಹುಬಲಿ ಪ್ರಸಂಗ ಕಾವ್ಯಭಾಗದ ಸ್ವಾರಸ್ಯವನ್ನು ಸಂಕ್ಷೇಪವಾಗಿ ವಿವರಿಸಿ.

2) ರಂಗಣ್ಣನ ವೃತ್ತಿ ಜೀವನದ ಅನುಭವಗಳನ್ನು ಬರೆಯಿರಿ.

3) ಅಸಹಾಯಕತೆಯ ನೋವು ''ದೋಣಿಯ ಹಾಡು'' ಕವಿತೆಯಲ್ಲಿ ಅಭಿವ್ಯಕ್ತಿಗೊಂಡ ಬಗೆಯನ್ನು ವಿವರಿಸಿ.

4) ಸಾಹಸಿಗೆ ಯಾವುದೂ ಅಸಾಧ್ಯವಲ್ಲ ಎಂಬುದನ್ನು ಶ್ರೀಮತಿ ಕವಿತಾ ಮಿಶ್ರಾರವರು ಸಾಬೀತು ಪಡಿಸಿದ ಬಗೆಯನ್ನು ವಿವರಿಸಿ.

III. ಒಂದಕ್ಕೆ ಭಾವಸ್ವಾರಸ್ಯ ಬರೆಯಿರಿ : **(1×4=4)**

1) ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆರಗಿಸುವೆಂ ಸಮಸ್ತಸುರ ಸಮುದಯಮಂ.

2) ಮದ್ದುಗುಂಡಿನ ಹೊಗೆಯ ಹಬ್ಬಿಸಿದ ಧಗೆಯಲ್ಲಿ
ಮುಡಿದ ಮಲ್ಲಿಗೆಯೆಲ್ಲ ಬಾಡಿಹೋದೊ
ಕುಣಿವ ಕಾಲಿನ ಗೆಜ್ಜೆ ಕಳಚಿ ಬಿದ್ದಿತ್ತಲ್ಲೊ
ಹಾಡುಗಳು ನೀರಿನಲಿ ಚೆಲ್ಲಿಹೋದೊ.

P.T.O.

IV. ಮೂರಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ : (3×4=12)

1) ಸುಳಿಯಬಲ್ಲವೊ ನಿನ್ನ ನಲಿವಿನುಲಿವಿನ ಸನಿಹಕೆ.

2) ಕಂಬಳಿ ಹುಳುವೇ ಬಣ್ಣದ ಚಿಟ್ಟೆಯಾಗುತ್ತೆ.

3) ಬೇಡ ಬೊಕ್ಕತಲೆ ಮೇಷ್ಟ್ರ ಪಾಠವೇ ಬೇಡ.

4) ಮರಮರದ ಮೇಲೆಲ್ಲ ನೋವು ಕೂಗುತ್ತಿತ್ತು.

5) ಒಳಗೆ ಕತ್ತಲೆಯಲ್ಲಿ ದುಂಬಿ ಮೊರೆಯುತಿವೆ.

V. ಎರಡಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ಪಂಪ

2) ಶ್ರೀಕೃಷ್ಣ ಆಲನಹಳ್ಳಿ

3) ಸಿದ್ಧಲಿಂಗಯ್ಯ

4) ಸರಸ್ವತಿ ರಾವ್.

VI. ಒಂದು ವಾಕ್ಯದಲ್ಲಿ ಉತ್ತರಿಸಿ : (8×1=8)

1) ಪಂಪನ ತಂದೆಯ ಹೆಸರೇನು ?

2) ಮಂಕುತಿಮ್ಮನ ಕಗ್ಗ ಯಾರ ಕೃತಿಯಾಗಿದೆ ?

3) ಚಂಪಾರವರ ಪೂರ್ಣ ಹೆಸರೇನು ?

4) 'ಶಾಲ್ಮಲಾ' ಕವನದ ಕವಿ ಯಾರು ?

5) ಸಿದ್ಧಲಿಂಗಯ್ಯನವರ ಆತ್ಮಕಥೆ ಯಾವುದು ?

6) ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು ?

7) ವಿಶ್ವದ ಪ್ರಥಮ ಅಣುವಿಜ್ಞಾನಿ ಯಾರು ?

8) ಭಾರತದ 'ಮಿಸೈಲ್ ಮ್ಯಾನ್' ಯಾರು ?

---

Reg. No. | | | | | | | | | | | | |

# BASKALN 202/BSWKALN 202/HRDKALN 202/BVAKALN 202

## II Semester B.A./B.S.W./B.A.(HRD)/B.V.A. Degree Examination, July/August 2023
## (NEP 2020) (2022-23 Batch Onwards)
## KANNADA LANGUAGE – I (AECC)

Time : 2 Hours Max. Marks : 60

I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಯಂತ್ರ ನಾಗರಿಕತೆಯು ನಮ್ಮ ಮುಂದಿಡುವ ಮಾದರಿಗಳನ್ನು ವಿವರಿಸಿರಿ.

2) ಪುಂಡರೀಕನಿಗೆ ಕುಸುಮ ಮಂಜರಿಯು ದೊರಕಿದ ಬಗೆ ಹೇಗೆ ?

3) ಸಂತೆಯಿಂದ ಬಿಡುಗಡೆಯಾದಾಗಲೇ ದೊರಕುವ ಸಂತತನವನ್ನು ವಿವರಿಸಿರಿ.

4) ಚಿತ್ರಕಲೆಗೂ, ಕಂಪ್ಯೂಟರ್ ಚಿತ್ರಕಲೆಗೂ ಇರುವ ವ್ಯತ್ಯಾಸಗಳನ್ನು ತೇಜಸ್ವಿ ಹೇಗೆ ಗುರುತಿಸಿದ್ದಾರೆ ?

II. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) 'ಕತೆಯಾದಳು ಹುಡುಗಿ' ಕತೆಯು ಕಟ್ಟಿಕೊಡುವ ಜೀವನ ದರ್ಶನವನ್ನು ಬರೆಯಿರಿ.

2) ವರ್ತಮಾನದ ಭಾರತದ ತಲ್ಲಣ–ಸಂಘರ್ಷಗಳಿಗೆ ಅಮೃತಬಳ್ಳಿ ಕಷಾಯ ನೀಡುವ ಪರಿಹಾರವನ್ನು ಬರೆಯಿರಿ.

3) ಜಪದ ಮಣಿಯ ಪ್ರಸಂಗವನ್ನು ಬರೆಯಿರಿ.

4) ಪಠ್ಯ ಪರಿಷ್ಕರಣೆ ಎಂದರೇನು ? ಪಠ್ಯ ಪರಿಷ್ಕರಣೆಯ ಸವಾಲುಗಳೇನು ?

III. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ **ಒಂದಕ್ಕೆ** ಭಾವ, ಸಂದರ್ಭ, ಸ್ವಾರಸ್ಯವನ್ನು ವಿವರಿಸಿರಿ : **(1×4=4)**

1) ಕುಡು ಚಪಳೆ ಜಪದ ಮಣಿಯಂ
ಕುಡದಿನ್ನೊಂದಡಿಯನಪ್ಪೊಡಂ ಪೋಗದಿರೆಂ
ದೊಡೆ ಕೇಳ್ದು ಜಪದ ಮಣಿಗೆ
ತ್ತೊಡನೆಯೆ ಹಾರಮನೆ ತೆಗೆದೆನೆನ್ನಯ ಕೊರಲಿಂ

2) ತಾರೆಗಳ ಜರತಾರಿಯಂಗಿ ತೊಡಿಸುವರಂತೆ
ಚಂದಿರನ ತಂಗಿಯರು ನಿನ್ನ ಕರೆದು ;
ಹೂವ ಮುಡಿಸುವರಂತೆ, ಹಾಲ ಕುಡಿಸುವರಂತೆ
ವೀಣೆ ನುಡಿಸುವರಂತೆ ಸುತ್ತ ನೆರೆದು.

P.T.O.

IV. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ **ಮೂರಕ್ಕೆ** ಭಾವ, ಸಂದರ್ಭ ಬರೆಯಿರಿ : **(3×4=12)**

1) ಸೋಲ್ತೆಂ ಕೂಡು ನೀನೆನ್ನೊಳೆಂದಳಿಮಾಲಾರವದಿಂದೆ ಪೇೞ್ವ ತೆಱದಿಂ
2) ಬಣ್ಣಬಣ್ಣದ ಕನಸು ಕರಗುವುದು ಬಲು ಬೇಗ
3) ಯೋಜನ ಯೋಜನ ಹಬ್ಬಿನಿಂತ ವ್ಯಾಪಾರ ವಹಿವಾಟಿನ ಸಹಜ ಜಹಜು
4) ಸಂತೆಯಲ್ಲಿ; ಎಲ್ಲಾ ಬಿಕರಿಗಿಟ್ಟ ಪರಿಕರ.

V. ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಕೆಂಪುಗಿಣಿ
2) ಕೆ. ಪಿ. ಪೂರ್ಣಚಂದ್ರ ತೇಜಸ್ವಿ
3) ಬಾವುಟದ ಮಣೆಗಾರ
4) ಕೆ. ಎಸ್. ನರಸಿಂಹಸ್ವಾಮಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(8×1=8)**

1) ಅಮೇರಿಕಾದ ಲೋಹಪುರುಷನೆಂದು ಪ್ರಸಿದ್ಧನಾದ ವ್ಯಕ್ತಿ ಯಾರು ?
2) 'ಕೆಂಪುಗಿಣಿ' ಕತೆಯ ಲೇಖಕರು ಯಾರು ?
3) ಹರಿಸೇವೆಯಲ್ಲಿ ಐದು ಗುಡ್ಡೆ ಕಡ್ಲೇಪುರಿಯನ್ನು ತಿನ್ನುವ ಪದ್ಧತಿಯನ್ನು ಏನೆಂದು ಕರೆಯುತ್ತಾರೆ ?
4) 'ಅಮೃತಬಳ್ಳಿ ಕಷಾಯ' ಲೇಖನವನ್ನು ಬರೆದವರು ಯಾರು ?
5) ಪುಂಡರೀಕನಿಗೆ ಕುಸುಮ ಮಂಜರಿಯನ್ನು ನೀಡಿದವರು ಯಾರು ?
6) 'ಮೈಸೂರು ಮಲ್ಲಿಗೆ' – ಇದು ಯಾರ ಕವನ ಸಂಕಲನ ?
7) ತೇಜಸ್ವಿಯವರು ಯಾವ ಕಥಾಸಂಕಲನದ ಮೂಲಕ ಸಾಹಿತ್ಯ ಕೃಷಿಯನ್ನು ಆರಂಭಿಸಿದರು ?
8) 'ಅಕ್ಷರ ಸ್ಖಾಲಿತ್ಯ' ಎಂದರೇನು ?

---

Reg. No. 

# BBAKALN 202

## II Semester B.B.A. Examination, July/August 2023
## (NEP 2020) (2022-23 Batch Onwards)
## KANNADA
## Kannada Language (AECC)

Time : 2 Hours                                                                 Max. Marks : 60

I. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **(2×8=16)**

1) 'ನೇಗಿಲ ಕುಲದೊಳಡಗಿದೆ ಕರ್ಮ, ನೇಗಿಲ ಮೇಲೆಯೆ ನಿಂತಿದೆ ಧರ್ಮ' – ಹೇಳಿಕೆಯನ್ನು ಕಾವ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

2) ಸ್ವಾಮಿ ಜಗದಾತ್ಮಾನಂದರ ಲೇಖನದಲ್ಲಿ 'ಬದುಕೆಂಬುದು ಕಲೆ' ಎನ್ನುವುದು ಹೇಗೆ ಅಭಿವ್ಯಕ್ತವಾಗಿದೆ ?

3) ಸಾವಿನ ನಂತರವೂ ವ್ಯಕ್ತಿ ಮತ್ತು ವ್ಯಕ್ತಿತ್ವ ಜೀವಂತವಾಗುವುದಕ್ಕೆ 'ಹೆಸರು ಸಾಯುವುದಿಲ್ಲ' ಕತೆ ಹೇಗೆ ಪೂರಕವಾಗಿದೆ ? ವಿಶ್ಲೇಷಿಸಿ.

4) 'ನಾಗಂದಿಗೆಯೊಳಗಿಂದ' ಆತ್ಮಕಥೆಯ ವಸ್ತುವನ್ನು ಬರೆಯಿರಿ.

II. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **(2×6=12)**

1) 'ಸಾಧಕನಿಗೆ ಮಹತ್ವಾಕಾಂಕ್ಷೆ ಬೇಕು' ಎಂಬುದಕ್ಕೆ ಹಾಜಬ್ಬ ಹೇಗೆ ಉದಾಹರಣೆಯಾಗುತ್ತಾರೆ ? ಚರ್ಚಿಸಿ.

2) ಆಧುನಿಕತೆಯಿಂದ ಹಳಸುತ್ತಿರುವ ದಾಂಪತ್ಯಕ್ಕೆ 'ನಾನು ಬಡವಿ' ಕವಿತೆ ಹೇಗೆ ಮಾದರಿಯಾಗಿದೆ ? ಚರ್ಚಿಸಿ.

3) 'ಕಣಿವೆಯ ಮುದುಕ' ಕವನದ ಸ್ವಾರಸ್ಯವನ್ನು ವಿವರಿಸಿರಿ.

4) ಬಿ. ಎಂ. ರೋಹಿಣಿಯವರ ಬದುಕನ್ನು ರೂಪಿಸುವಲ್ಲಿ ಶಾಲೆ ಮತ್ತು ಶಿಕ್ಷಕರ ಪಾತ್ರವೇನು ?

III. ಕೆಳಗಿನ ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ ಭಾವಾರ್ಥವನ್ನು ಬರೆಯಿರಿ. **(1×4=4)**

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ ?
ಇದು ಕಾರಣ ಕೂಡಲ ಸಂಗಮದೇವ
ಲಿಂಗಸ್ಥಲವನರಿದವನೇ ಕುಲಜನು !

**ಅಥವಾ**

'ನಿನ್ನದೆನ್ನದು ತಪ್ಪಿದಲ್ಲ' ಎಂದನು ಭಿಕ್ಷು
ತಪ್ಪೆಲ್ಲ ಸಂಸಾರದಾರಿದಂ ಕ್ಷಮಿಸೆ ?
ಮನ ದಮಿಸು, ತನ್ನೊಲನ್ಯರನರ್ತಿಸು, ತಿತಿಕ್ಷು
ವಾಗಂದು, ಗೆಳೆಯ, ನೀನಾವುದಂ ಭ್ರಮಿಸೆ.

P.T.O.

IV. ಮೂರು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. (3×4=12)

1) ಹಳೆಯ ಕೊಳೆಯ ಕಳೆವೆವು

2) ''ನಿನ್ನ ಈ ಬಗೆ ಮರುಕ ತಂದಿತು ಮರೆತ ಕಂದನ ನೆನಪನು''

3) 'ಮೋಕ್ಷವನೆ ನಚ್ಚಿದಿವನೆಲ್ಲಿ'

4) ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು

5) ಕಾಯಕನಿಂದಿತ್ತು ಹೋಗಯ್ಯ ಎನ್ನಾಳ್ದನೆ.

V. ಕೆಳಗಿನವುಗಳಲ್ಲಿ ಎರಡರ ಕುರಿತು ಟಿಪ್ಪಣಿ ಬರೆಯಿರಿ. (2×4=8)

1) ಕೆ. ಚಿನ್ನಪ್ಪಗೌಡ

2) ಅಮ್ಮೋನಿಯಸ್

3) ಹಿಂದಿ ಮಾಸ್ತು ಸಂಜೀವರಾಯ

4) ಎಂ. ಗೋಪಾಲಕೃಷ್ಣ ಅಡಿಗ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) 'ನೇಗಿಲ ಯೋಗಿ' ಕವನವು ಕುವೆಂಪುರವರ ಯಾವ ಕವನ ಸಂಕಲನದಿಂದ ಆರಿಸಲಾಗಿದೆ ?

2) ಆಯ್ದಕ್ಕಿ ಲಕ್ಕಮ್ಮಳ ಅಂಕಿತನಾಮವೇನು ?

3) 'ಅನಾಥೆ' ಕಾದಂಬರಿಯ ಕರ್ತೃ ಯಾರು ?

4) ದ. ರಾ. ಬೇಂದ್ರೆಯವರ ಕಾವ್ಯನಾಮವೇನು ?

5) ಮಾಸ್ತಿಯವರ ಕಾವ್ಯನಾಮವೇನು ?

6) ಎಂ. ಗೋವಿಂದ ಪೈಯವರ ಹೆತ್ತವರ ಹೆಸರೇನು ?

7) ಬಿ. ಎಂ. ರೋಹಿಣಿಯವರ ಕುಟುಂಬ ಯಾರ ಗೇಣಿ ಒಕ್ಕಲುಗಳಾಗಿದ್ದರು ?

8) ಬಿ. ಎಂ. ರೋಹಿಣಿಯವರ ಗೆಳತಿಯ ಹೆಸರೇನು ?

---

Reg. No. | | | | | | | | | |

**BBAKALN 201**

## II Semester B.B.A. Degree Examination, September 2022
## (NEP – 2020) (2021 – 22 Batch Onwards)
## KANNADA LANGUAGE (AECC)

Time : 2 Hours | Max. Marks : 60

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ರಾವಣನ ಉತ್ತಮ ವ್ಯಕ್ತಿತ್ವ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

**ಅಥವಾ**

ಚೆನ್ನಯ್ಯನ ಗುಪ್ತಭಕ್ತಿಯನ್ನು ಶಿವ ಜಗತ್ತಿಗೆ ತೋರಿಸಿದ ಸಂದರ್ಭವನ್ನು ಕುರಿತು ಬರೆಯಿರಿ.

2) "ಗಿರಿಜಾ ಕಂಡ ಸಿನೆಮಾ" ಕಥೆಯಲ್ಲಿ ಗಿರಿಜಾಳಿಗೆ ವಾಸ್ತವಿಕ ಜೀವನದ ಅನುಭವ ಆದ ಬಗೆಯನ್ನು ವಿವರಿಸಿರಿ.

**ಅಥವಾ**

ಬಿ.ಜಿ.ಎಲ್.ಸ್ವಾಮಿಯವರ 'ಚಟವನ್ನು ಕುರಿತು' ಲೇಖನದ ಸ್ವಾರಸ್ಯವನ್ನು ಬರೆಯಿರಿ.

3) ನಾ.ಮೊಗಸಾಲೆಯವರ "ಮುಖಾಂತರ" ಕಾದಂಬರಿಯಲ್ಲಿ ವೆಂಕಪ್ಪಯ್ಯ ಮತ್ತು ಕೃಷ್ಣಯ್ಯನ ವ್ಯಕ್ತಿತ್ವವನ್ನು ವಿಶ್ಲೇಷಿಸಿರಿ.

**ಅಥವಾ**

ನಾ. ಮೊಗಸಾಲೆಯವರ "ಮುಖಾಂತರ" ಕಾದಂಬರಿಯ ಆಶಯವನ್ನು ಬರೆಯಿರಿ.

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಭಕ್ತರ ಸಮರ್ಪಣಾಭಾವ ಅಕ್ಕಮಹಾದೇವಿಯ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

ಜನಪದರು ಕಂಡ ಕುಂತಿಯ ಕರುಣಾಜನಕ ಕಥೆಯನ್ನು ಕೊಂತ್ಯಮ್ಮ ಕಥನ ಕಾವ್ಯದ ಹಿನ್ನೆಲೆಯಲ್ಲಿ ಬರೆಯಿರಿ.

2) "ನಮ್ಮ ಎಮ್ಮೆಗೆ ಮಾತು ತಿಳಿಯುವುದೇ ?" ಪ್ರಬಂಧದ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ಜೀ.ಶಂ. ಪರಮಶಿವಯ್ಯ ಅವರ "ನಮ್ಮ ಮಗುವಿಗೊಂದು ಹೆಸರು" ಲೇಖನದ ಸ್ವಾರಸ್ಯವನ್ನು ಬರೆಯಿರಿ.

3) ನಾ. ಮೊಗಸಾಲೆಯವರ 'ಮುಖಾಂತರ' ಕಾದಂಬರಿಯಲ್ಲಿ ಬರುವ ಪಾರ್ವತಕ್ಕ ಮತ್ತು ಒಪ್ಪಕ್ಕನ ಪಾತ್ರವನ್ನು ಕುರಿತು ಬರೆಯಿರಿ.

**ಅಥವಾ**

ನಾ. ಮೊಗಸಾಲೆಯವರ 'ಮುಖಾಂತರ' ಕಾದಂಬರಿಯಲ್ಲಿ ಬರುವ ಈಶ್ವರಿ ಮೂಲೆಯ ಮೂಲದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.

III. ಕೆಳಗಿನ ಒಂದು ಪದ್ಯಭಾಗದ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯದೊಂದಿಗೆ ವಿವರಿಸಿರಿ. **(1×5=5)**

1) ನಳಕೂಬರನ ಕುಲಾಂಗನೆ
ವಿಳಾಸವತಿ ರಾವಣಂಗೆ ಪಲಕಾಲಂ ಮು
ನ್ನೆಳಸಿರ್ಪ ಕಾಮಕಾತರೆ
ಕೆಳದಿಗೆ ತಿಳಿವಂತು ತನ್ನ ತೆಱನಂ ಪೇೞ್ದಳ್

ಅಥವಾ

2) ಸಿದ್ಧಾರ್ಥ ತನಗೇ ಕಾಡಿದ್ದೇ ಕಂಡುಕೊಳ್ಳಲು
ಸಿರಿ ಸಂಪತ್ತು, ಭೋಗ ಭಾಗ್ಯಗಳನ್ನೆಲ್ಲ ಧಿಕ್ಕರಿಸಿ
ಹಳ್ಳ, ಕೊಳ್ಳ, ನದಿ, ಗುಡ್ಡ ಬೆಟ್ಟಗಳ ತಿರುತಿರುಗಿ
ಎದುರಾದ ಎಲ್ಲರಿಗೂ ಮುಂದೇನು ? ಮುಂದೇನು ?
ಪ್ರಶ್ನೆಯನು ಹಾಕಿದ
ಶೂನ್ಯಕ್ಕೆ ಅರ್ಥ ಹುಡುಕಲು
ಬೋಧಿ ಬುಡದಲಿ ಕುಳಿತ
ಪರೆ ಕಳಚಿಕೊಂಡು–ಬುದ್ಧನಾದ

IV. ಕೆಳಗಿನ ಎರಡು ವಾಕ್ಯಗಳನ್ನು ಸಂದರ್ಭಸಹಿತ ಸ್ವಾರಸ್ಯದೊಂದಿಗೆ ವಿವರಿಸಿರಿ. **(2×4=8)**

1) 'ಮದಕರಿಯಂ ಮೃಗವೈರಿ ಪಿಡಿವ ತೆಱದಿಂ'
2) ಶಿರ ಹಜೆದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು
3) 'ಒಂದು ಮರುಳು ಜಡೆ, ಅದೂ ಬ್ರಹ್ಮಗಂಟು'
4) ಶೋಷಣೆಯಲೆ ಶೃಂಗಾರವು ಆಯಿತೆನ್ನ ಹೆಣಕೆ

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ರಾಮಚಂದ್ರ ಚರಿತ ಪುರಾಣ'ಕ್ಕೆ ಪ್ರಾಕೃತದ ಆಕರ ಗ್ರಂಥ ಯಾವುದು ?
2) ಕೊಂತಿಪೂಜೆ ಯಾವ ಪ್ರದೇಶದಲ್ಲಿ ಪ್ರಸಿದ್ಧವಾಗಿದೆ ?
3) 'ಮೈಸೂರು ಮಲ್ಲಿಗೆ' ಕವನ ಸಂಕಲನವನ್ನು ಬರೆದವರು ಯಾರು ?
4) 'ಗಿರಿಜಾ ಕಲ್ಯಾಣ' ಚಂಪೂಕೃತಿಯನ್ನು ಬರೆದವರು ಯಾರು ?
5) ಗೊರೂರು ರಾಮಸ್ವಾಮಿ ಅಯ್ಯಂಗಾರರ ಹುಟ್ಟೂರು ಯಾವುದು ?
6) ಬಿ.ಜಿ.ಎಲ್. ಸ್ವಾಮಿಯವರ ಪೂರ್ಣ ಹೆಸರೇನು ?
7) 'ಉಲ್ಲಂಘನೆ' ಕಾದಂಬರಿಯನ್ನು ಬರೆದವರು ಯಾರು ?
8) ಈಶ್ವರಿ ಮೂಲೆಯ ದತ್ತು ಪುತ್ರ ಯಾರು ?

Reg. No. | | | | | | | | | | | | |

# BCAKALN 202

## II Semester B.C.A. Degree Examination, July/August 2023
## (NEP 2020) (2022 – 2023 Batch Onwards)
## KANNADA
## Kannada Language (AECC)

Time : 2 Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಪ್ರೀತಿಯ ಗೆಳೆಯ ಕರ್ಣನ ಉದಾತ್ತ ಗುಣಗಳು ದುರ್ಯೋಧನನಿಂದ ಹೇಗೆ ಪ್ರಕಟವಾಗಿವೆ ? ವಿಶದೀಕರಿಸಿ.

2) ಕನ್ನಡ ಭಾಷೆಯ ಬೆಳವಣಿಗೆಗೆ ಆಧುನಿಕ ತಂತ್ರಜ್ಞಾನ ಹೇಗೆ ಸಹಕಾರಿಯಾಗಿದೆ ?

3) ನೇಮಿಚಂದ್ರರ 'ಬದುಕು ಕಾಯುವುದಿಲ್ಲ' ಕಥೆಯ ಸ್ವಾರಸ್ಯವನ್ನು ವಿವರಿಸಿರಿ.

4) ಲೇಖಕರಾಗಿ, ಪರಿಸರವಾದಿಯಾಗಿ, ವೈದ್ಯರಾಗಿ ಮೊಯ್ದಿನ್‌ರವರು ನಾಡಿಗೆ ನೀಡಿದ ಕೊಡುಗೆಗಳೇನು ? ವಿವರಿಸಿರಿ.

II. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) ಕಾಣಿಯ ಶೋಷಣೆಯ ಸ್ವರೂಪವನ್ನು ಕಥೆಗಾರರು ಹೇಗೆ ವಿವರಿಸಿದ್ದಾರೆ ?

2) ಕ್ಯಾಮರಾ ಕೈಗಾರಿಕೆಯಲ್ಲಿ ಜಪಾನ್‌ನ ಸಾಧನೆ ಏನು ? ವಿವರಿಸಿರಿ.

3) 'ಗಂಡ ಹೆಂಡತಿಯರ ಜಗಳ ಗಂಧ ತೀಡಿದಾಂಗ' ಎನ್ನುವುದನ್ನು 'ಮನದನ್ನೆ' ಕವನ ಹೇಗೆ ನಿರೂಪಿಸುತ್ತದೆ ? ತಿಳಿಸಿ.

4) ಸಂಗ್ರಹಣೆ, ಶೇಖರಣೆಗಿಂತ ಹಂಚಿಕೊಳ್ಳುವುದರಲ್ಲಿ ನಿಜವಾದ ಸಂತೃಪ್ತಿ ಇದೆ ಎಂಬುದು ದೀಪ್ತಿ ರಾವ್ ಅವರ ಲೇಖನದಲ್ಲಿ ಹೇಗೆ ನಿರೂಪಿತವಾಗಿದೆ ?

III. ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ : **(1×4=4)**

1) ಮುಳಿಸು ಮಾವನ ಮೇಲೆ; ಮಗಳೇನ ಮಾಡಿದಳು ?
ನಿಮಗೇತಕೀ ಕಲ್ಲು ಮನಸ್ಸು ?
ಹೋಗಿ ಬನ್ನಿರಿ, ಒಮ್ಮೆ ಕೈಮುಗಿದು ಬೇಡುವೆನು
ಅಮ್ಮನಿಗೆ ನಿಮ್ಮದೇ ಕನಸು

P.T.O.

2) ಅಱೆಯೆನಿದಂ ನಿನ್ನಿಂದಿನ
ತೆಱನಂ ನೀನೆನಗದೇಕೆ ಮುಳಿದಿರ್ದಯೊ ಮೇಣ್
ಮಱುಮಾತುಗುಡದೆ ರವಿಸುತ
ಮಱವಿಂದಿರ್ದಪೆಯೊ ಮೇಣ್ ಬಱಲ್ದಿರ್ದಪೆಯೋ

IV. ಮೂರರ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ : (3×4=12)

1) ದೀಪದಲಿ ಬಿಡುಗಣ್ಣನಿರಿಸಿ
2) ಜೀವ ಸಂವಾದಕ್ಕೆ ಹಸಿದು ಬಂದೆ
3) ಕಲ್ಲೆರ್ದೆ ತನದಿಂದೆನ್ನಂತು ಬರ್ದನಾವನುಮೊಳನೇ
4) ಒಣಗಬಾರದು ಒಡಲ ಚಿಲುಮೆ
5) ಇಲ್ಲದ ಗುಣಗಳ ತರಿಸೋದು ರೊಕ್ಕ

V. ಎರಡಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ನಿರಂಜನ
2) ನುಡಿತಂತ್ರಾಂಶ
3) ದ.ರಾ. ಬೇಂದ್ರೆ
4) ರಾಜಪ್ಪ ದಳವಾಯಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : (1×8=8)

1) ರನ್ನನಿಗೆ 'ಕವಿಚಕ್ರವರ್ತಿ' ಬಿರುದನ್ನು ನೀಡಿದ ರಾಜ ಯಾರು ?
2) ನಿರಂಜನ ಅವರ ಮೊದಲ ಹೆಸರು ಯಾವುದು ?
3) 'ಹಾದಿಗಲ್ಲು' ಇದು ಯಾರ ಕೃತಿ ?
4) ಕುವೆಂಪು ಅವರ ಬದುಕು, ವ್ಯಕ್ತಿತ್ವವನ್ನು ಕುರಿತಾದ ತೇಜಸ್ವಿಯವರ ಗ್ರಂಥ ಯಾವುದು ?
5) ಬೇಂದ್ರೆಯವರು ಬರೆದ ಕಥಾಸಂಕಲನ ಯಾವುದು ?
6) ಮೇರಿ ಕ್ಯೂರಿ ಜೀವನಚರಿತ್ರೆಯ ಕುರಿತಾದ ನೇಮಿಚಂದ್ರ ಅವರ ಕೃತಿ ಯಾವುದು ?
7) ಡಾ. ರಾಜಪ್ಪ ದಳವಾಯಿ ಯಾವ ರೀತಿಯ ನಾಟಕಗಳ ರಚನೆಗೆ ಪ್ರಸಿದ್ಧರು ?
8) ಬ್ಯಾರಿ ಭಾಷೆಯ ಪ್ರಪ್ರಥಮ ಅಂತರ್ಜಾಲ ಪತ್ರಿಕೆ ಯಾವುದು ?

---

Reg. No. | | | | | | | | | | | | |

# BCAKALN 201

## II Semester B.C.A. Degree Examination, July/August 2023
## (NEP – 2020) (2021 – 22 Batch)
## KANNADA LANGUAGE (AECC)

ಸಮಯ : 2 ಗಂಟೆಗಳು  ಗರಿಷ್ಠಾಂಕಗಳು : 60

***ಸೂಚನೆ :*** *ಸೂಚನೆಗನುಗುಣವಾಗಿ ಉತ್ತರಿಸಿ.*

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಭೀಮನ ಪ್ರತಿಜ್ಞಾ ವೃತ್ತಾಂತವು ರನ್ನನ ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

**ಅಥವಾ**

ಜೇಡರ ದಾಸಿಮಯ್ಯನ ವಚನಗಳಲ್ಲಿ ನಿರೂಪಿತವಾದ ಡಾಂಭಿಕ ಭಕ್ತಿಯ ಸ್ವರೂಪವನ್ನು ವಿಶದಪಡಿಸಿ.

2) ವಿಧವಾ ವಿವಾಹ ಪ್ರಸಂಗವನ್ನು ಗೌರಮ್ಮ ಕ್ರಾಂತಿಯಾಗಿಸಿದ ಬಗೆ ಹೇಗೆ ? ತಿಳಿಸಿ.

**ಅಥವಾ**

ಭಾರತೀಯ ಸಂಸ್ಕೃತಿಯ ಬಗೆಗೆ ಕಾರಂತರ ಕಾಳಜಿಗಳೇನು ಎಂಬುದನ್ನು ಚರ್ಚಿಸಿ.

3) 'ಮಣ್ಣು' ಎಂಬ ನೀಳ್ಗತೆಯು ಒಡಮೂಡಿಸುವ ವಿವಿಧ ಸಾಂಕೇತಿಕತೆಗಳನ್ನು ಕುರಿತು ಬರೆಯಿರಿ.

**ಅಥವಾ**

ಹೈದ್ರಾಬಾದಿನ ಸಹಪಾಠಿಗಳೊಂದಿಗೆ ದೇವೇಂದ್ರನ ಸಂಬಂಧ ಹೇಗಿತ್ತು ? ವಿವರಿಸಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಜನಪದ ಕಾವ್ಯಭಾಗದಲ್ಲಿ ಬರುವ ಪುರುಷ ಪಾತ್ರಗಳ ಮೇಲೆ ಕಾಳಮ್ಮ ತನ್ನ ಪ್ರಭುತ್ವವನ್ನು ಹೇಗೆ ಸ್ಥಾಪಿಸಿದ್ದಾಳೆ ? ವಿವರಿಸಿರಿ.

**ಅಥವಾ**

'ಬಾರೋ ಸಾಧನಕೇರಿಗೆ' ಕವನದ ಆಶಯವನ್ನು ತಿಳಿಸಿ.

**ಪು.ತಿ.ನೋ.**

2) ಏಕಾಗ್ರತೆಯನ್ನು ಸಾಧಿಸಬೇಕೆಂಬುದರ ಬಗ್ಗೆ ಪಾ. ವೆಂ. ಆಚಾರ್ಯರು ನೀಡುವ ಸಲಹೆಗಳೇನು ?

**ಅಥವಾ**

'ಮಂಗಳೂರಿನ ಬಸ್ಸುಗಳ' ಅವಾಂತರಗಳನ್ನು ಭುವನೇಶ್ವರಿ ಹೆಗಡೆಯವರ ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿರಿ.

3) ದೇವೇಂದ್ರನ ತಂದೆಯ ಗುಣ-ಸ್ವಭಾವವನ್ನು 'ಮಣ್ಣು' ನೀಳ್ಗತೆಯ ಹಿನ್ನೆಲೆಯಲ್ಲಿ ತಿಳಿಸಿರಿ.

**ಅಥವಾ**

ಹಳ್ಳ ದಾಟಲು ನೆರವಾಗುವ ಊರಗೌಡನ ಮಾನವೀಯತೆ 'ಮಣ್ಣು' ಕಥೆಯಲ್ಲಿ ಹೇಗೆ ಪ್ರಕಟವಾಗಿದೆ ? ತಿಳಿಸಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯ ಬರೆಯಿರಿ. **(1×5=5)**

ಒಡಲೊಡಮೆಯೆಂಬಿವೆರಡುಂ

ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ

ಕೆಡುವೊಡಲೊಡಮೆಯನೆಂದುಂ

ಕೆಡದೊಡಮೆಗೆ ಮಾಱುಗುಡುವುದಿಱಿವಬೆಡಂಗಾ.

**ಅಥವಾ**

ನಿಲ್ಲುವುದಿದ್ದರೆ ನಿಲ್ಲಬೇಕು ನಿನ್ನಂತೆ

ಅಭಿಮಾನ ಜೀವ ತಳೆದಂತೆ

ಅಹಂ ಭರತಕ್ಕೆ ಕರಗದ ಶಿಲೆಯಾಗಿ

ಪ್ರೀತಿಯ ಉಳಿಗೆ ಮೈಯೊಡ್ಡುವಂತೆ.

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2×4=8)**

1) 'ಕನಸುಗಳಿಲ್ಲದ ಬಾಳು ಬಾಳಲಾಗದು ಕಂದಾ'

2) ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.

3) ಸತ್ತು ಬಿದ್ದಿದೆ ಮನಸು ಕನಸುಗಳ ಕಳಕೊಂಡು.

4) ಹುಟ್ಟಿದ ಮಕ್ಕಳ್ಗೆಲ್ಲ ಹೆಸರ್ಕರಿತೀನಿ ಅಂತೇಳಿದ್ದಳು.

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) ‘ಷೈಲು’ ಕವಿತೆಯನ್ನು ಬರೆದವರು ಯಾರು ?

2) ‘ಗದಾಯುದ್ಧ’ ಕೃತಿಗಿರುವ ಇನ್ನೊಂದು ಹೆಸರೇನು ?

3) ಜೇಡರ ದಾಸಿಮಯ್ಯನ ವಚನಗಳ ಅಂಕಿತವೇನು ?

4) ಕಾರಯ್ಯ–ಬಿಲ್ಲಯ್ಯರನ್ನು ಶಿಷ್ಯರನ್ನಾಗಿ ದತ್ತು ಪಡೆದವರು ಯಾರು ?

5) ‘ಕರ್ನಾಟಕದ ಕಾಶ್ಮೀರ’ ಎಂದು ಖ್ಯಾತಿ ಪಡೆದ ಸ್ಥಳ ಯಾವುದು ?

6) ‘ಕಡಲ ತಡಿಯ ಭಾರ್ಗವ’ ಎಂದು ಯಾರನ್ನು ಕರೆಯಲಾಗಿದೆ ?

7) ‘ಹಂಗು’ ಕಥೆಯನ್ನು ಕಣಗಾಲರ ಯಾವ ಚಲನಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ ?

8) ಗಿರಡ್ಡಿ ಗೋವಿಂದರಾಜ ಯಾವ ವಿವಿಯಿಂದ ಪಿಎಚ್.ಡಿ. ಪದವಿ ಪಡೆದದ್ದು ?

---

Reg. No. [ ]

**BCMKALN 201**

# II Semester B.Com. Degree Examination, September 2022
## (NEP 2020 – 2021-22 Batch Onwards)
## KANNADA
## Kannada Language (AECC)

Time : 2 Hours

Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) ಸರೋವರದಲ್ಲಿ ಅಡಗಿ ಕುಳಿತ ಸುಯೋಧನನನ್ನು ಭೀಮಸೇನನು ಮೂದಲಿಸಿದ ಬಗೆಯನ್ನು ವಿವರಿಸಿ.

**ಅಥವಾ**

ನಂಬಿಯಣ್ಣನ ವಿವಾಹ ಮಂಟಪದಲ್ಲಿ ವೃದ್ಧ ಮಾಹೇಶ್ವರ ಮಾಡಿದ ಅವಾಂತರಗಳೇನು ? ವಿವರಿಸಿ.

2) ನಿರೂಪಕರ ಮನೆ ಮಂದಿಯ ನಿತ್ಯ ಬದುಕಿನಲ್ಲಿ ಕುದುರೆಯ ಪಾತ್ರ ಹೇಗಿತ್ತು? ವಿಶ್ಲೇಷಿಸಿರಿ.

**ಅಥವಾ**

ಹೆಂಡತಿಯನ್ನು ಕಳೆದುಕೊಂಡ ರಾಜರಾಂ ವೃದ್ಧಾಶ್ರಮದ ಪಾಲಾದುದು ಹೇಗೆ ? ವಿವರಿಸಿರಿ.

3) ಹಳ್ಳಿಯೊಂದು ಕ್ರಾಂತಿಕಾರಕ ಬದಲಾವಣೆಯತ್ತ ಸಾಗುತ್ತಿರುವ ಚಿತ್ರಣ 'ಕಿರಗೂರಿನ ಗಯ್ಯಾಳಿಗಳು' ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

**ಅಥವಾ**

ಶಂಕ್ರಪ್ಪನ ಪಾತ್ರದ ವೈಶಿಷ್ಟ್ಯವನ್ನು ವಿಶದಪಡಿಸಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಕಡಲ ತೀರದ ಮಂದಿಯ ಜೀವನ ವೃತ್ತಾಂತ 'ಮೀನು ಪೇಟೆ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.

**ಅಥವಾ**

'ನನ್ನ ಪ್ರೀತಿಯ ಕುಕ್ಕರ್' ಕವಿತೆಯ ಸ್ವಾರಸ್ಯವನ್ನು ವಿವರಿಸಿರಿ.

2) ವಾಸನೆಯನ್ನು ಗ್ರಹಿಸುವ ಮೂಗಿನ ವೈಜ್ಞಾನಿಕ ಹಿನ್ನೆಲೆಯನ್ನು ವಿವರಿಸಿರಿ.

**ಅಥವಾ**

'ಇಲ್ಲಿಯ ಬದುಕು ಅಲ್ಲಿಯ ಸರಕು' ಪ್ರಬಂಧದ ಆಶಯವನ್ನು ಬರೆಯಿರಿ.

3) ಕಿರಗೂರಿನ ಹಳ್ಳಿಯ ವೈಶಿಷ್ಟ್ಯವೇನು ? ವಿವರಿಸಿ.

**ಅಥವಾ**

ದಾನಮ್ಮಳ ಪಾತ್ರದ ವೈಶಿಷ್ಟ್ಯವನ್ನು ಕಾದಂಬರಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

**P.T.O.**

III. ಕೆಳಗಿನ ಒಂದು ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. (1×5=5)

ನಿನ್ನನು ಜನರುಣ ಜಲಮಂ
ಮುನ್ನಂ ತವೆ ಪೀರ್ದೊಡಂಜಿ ನೀಂಪುಗೆ ಕೊಳನಂ
ಬೆನ್ನನೆ ಬಂದಾತಂ ಶೌ-
ರ್ಯೋನ್ನತನೀಯಿರ್ದನತ್ತಿ ಕೌರವಮಲ್ಲಂ

ಅಥವಾ

ನಿನ್ನೆವರೆಗೆ ಕಾಲಕಸ ಸದರದ ನೆರೆ
ದುಡಿತದ ಆಳಾಗಿದ್ದವಳ
ಇಂದು ಮಾತನಾಡಿಸಲು ಅಳುಕು
ಮುಟ್ಟಲು ಎದೆ ಡವಡವ
ಹಿಂದಿನಂತೆ ಉಪಯೋಗಿಸಲು ಭಯ

IV. ಕೆಳಗಿನ ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (2×4=8)

1) ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವವೊಲ್
2) ಹೇಗೆ ಒಪ್ಪಲಿ ಈಗ ಏನೂ ಉಳಿದಿಲ್ಲವೆಂಬ ದೂರು ?
3) ನಿನ್ನ ಅವ್ವನಲ್ಲಿ ಜಗದ ತಾಯಂದಿರು ಇದ್ದಾರೆ ಮಗೂ
4) ನಂಟುತನದ ಭಕ್ತಿ ನಾಯಕ ನರಕ, ಬಡವನ ಭಕ್ತಿ ನಿಧಾನ

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (1×8=8)

1) ರನ್ನನ ಗುರು ಯಾರು ?
2) ಚೆನ್ನ ಬಸವಣ್ಣನ ವಚನಗಳ ಅಂಕಿತವೇನು ?
3) ಹರಿಹರನ ಚಂಪೂ ಕೃತಿ ಯಾವುದು ?
4) ಜಿ.ಟಿ. ನಾರಾಯಣರಾವ್ ಅವರ ಆತ್ಮಕಥೆಯ ಹೆಸರೇನು ?
5) 'ಅಪ್ಪ ಆಂದ್ರೆ ಆಕಾಶ' ಕೃತಿಯನ್ನು ಬರೆದ ಲೇಖಕರು ಯಾರು ?
6) ಜಿ.ಪಿ.ಬಸವರಾಜು ಸಂಪಾದಕರಾಗಿ ಕೆಲಸ ಮಾಡುತ್ತಿದ್ದ ಪತ್ರಿಕೆ ಯಾವುದು ?
7) 'ಕಿರಗೂರಿನ ಗಯ್ಯಾಳಿಗಳು' ಕಾದಂಬರಿಯನ್ನು ಬರೆದವರು ಯಾರು ?
8) ದಾನಮ್ಮನ ಗಂಡನ ಹೆಸರೇನು ?

---

Reg. No. | | | | | | | | | | | | |

# BCMKALN 202

## II Semester B.Com. Examination, July/August 2023
## (2022 – 23 Batch Onwards) (NEP 2020)
## KANNADA (AECC)

ಸಮಯ : 2 ಗಂಟೆಗಳು 　　　　　　　　　　　　　　　　　　　　　　ಗರಿಷ್ಠಾಂಕಗಳು : 60

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **(2×8=16)**

1) ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ಸೌಂದರ್ಯ ಮತ್ತು ಅದರ ವಿವಿಧ ಮಜಲುಗಳನ್ನು ದೃಷ್ಟಾಂತಗಳೊಂದಿಗೆ ಚರ್ಚಿಸಿರಿ.

2) ಭಕ್ತಿಯ ವಿವಿಧ ಸ್ವರೂಪಗಳು ಮತ್ತು ಡಾಂಭಿಕ ಭಕ್ತಿಯ ವಿಡಂಬನೆ ದಾಸಿಮಯ್ಯನ ವಚನಗಳಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

3) ಜಗತ್ತು ಮತ್ತು ಜಗತ್ತಿನ ಚರಾಚರ ವಸ್ತುಗಳು ಸೃಷ್ಟಿಯಾದ ಬಗೆಯನ್ನು ಮಂಟೇಸ್ವಾಮಿಯ ಕಾವ್ಯದ ಆಧಾರದಲ್ಲಿ ವಿವರಿಸಿರಿ.

4) ಆದೇಶ ಪತ್ರ ಅಥವಾ ನಡೆವಳಿಗಳು ಎಂದರೇನು ? ಉದಾಹರಣೆ ಸಹಿತ ವಿವರಿಸಿರಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(2×6=12)**

1) ಪಂಪನ ಬನವಾಸಿ ದೇಶದ ವರ್ಣನೆಯನ್ನು ಕುರಿತು ಬರೆಯಿರಿ.

2) ಅಮರನಾಥ ಕ್ಷೇತ್ರದ ಪೌರಾಣಿಕ ಹಿನ್ನೆಲೆಯನ್ನು ವಿವರಿಸಿರಿ.

3) ಕೌರವ ಪಾಂಡವರ ಮಕ್ಕಳಾಟವನ್ನು 'ಧರ್ಮ ವಿಜಯ' ಕಾವ್ಯದಲ್ಲಿ ಚಿತ್ರಿತವಾದ ಬಗೆಯನ್ನು ವಿವರಿಸಿರಿ.

4) ನಂಬಿದ ಕೃಷಿಯು ಎಂದಿಗೂ ಕೈ ಬಿಡದು ಎಂಬುದು ಅನ್ನದಾತ ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ?

III. **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮ ಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರಳು ಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ.

2) ಬೆಂಡೆ ಬಿತ್ತುವುದಾ ? ತೊಂಡೆ ಹಬ್ಬಿಸುವುದಾ ?
ಭತ್ತ ಬೆಳೆಯುವುದಾ ?
ತುಸು ಹೆಚ್ಚೇ ಇದ್ದರೆ ಕಟ್ಟಡ ಕಟ್ಟಿಸಿ
ಬಿಕರಿಗಿಡುವುದಾ ?
ಅವರವರ ಅನುಕೂಲಕ್ಕೆ ತಕ್ಕ ಹಾಗೆ.

ಪು.ತಿ.ನೋ.

IV. ಯಾವುದಾದರೂ ಮೂರು ವಾಕ್ಯಗಳ ಸಂದರ್ಭ ಸೂಚಿಸಿ, ವಿಶೇಷತೆಯನ್ನು ತಿಳಿಸಿರಿ. **(3×4=12)**

1) ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.
2) ಸೀತೆಯ ಕಣ್ಣೀರೊಳು ಮಿಂದ ಜಡೆ.
3) ಅಂಧಕನ ಕೈಯ ಅಂಧಕ ಹಿಡಿವಂತೆ.
4) ಉಂಬದವ ಏವಕ್ಕಿ ಅಶನವೋ !
5) ಕ್ರಯ-ವಿಕ್ರಯಗಳ ತಕ್ಕಡಿಯೊಳಗೆ ತೂಗಿಸಿಕೊಂಡೇ ನಿಲ್ಲುತ್ತದೆ.

V. ಎರಡರ ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಪಂಪ
2) ಅಮರನಾಥ ದರ್ಶನ
3) ಒಂದು ಖಾಲಿ ಜಾಗ
4) ಬೃಹದುದ್ದಿಮೆಗಳ ಜಾಗತೀಕರಣ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ. **(1×8=8)**

1) ಕನ್ನಡದ ಮೂರನೇ ರಾಷ್ಟ್ರಕವಿ ಯಾರು ?
2) ಕನ್ನಡದ 'ಭಾರತೀಯ ಕಾವ್ಯ ಮೀಮಾಂಸೆ' ಕೃತಿಯನ್ನು ಬರೆದ ಆಚಾರ್ಯರು ಯಾರು ?
3) ಜೇಡರದಾಸಿಮಯ್ಯನ ಅಂಕಿತನಾಮವೇನು ?
4) ಕನಕದಾಸರ ಅಂಕಿತನಾಮವೇನು ?
5) ಯಾರ ದೇಹದ ಭಾಗಗಳಿಂದ ಭೂಮಿಯ ಕಲ್ಲು, ಮಣ್ಣು, ಬೆಟ್ಟಗುಡ್ಡಗಳು ಸೃಷ್ಟಿಯಾದವು ?
6) ಹವಿಗನ್ನಡದ ಮಹಾಕವಿಯೆಂದು ಪ್ರಸಿದ್ಧರಾದವರು ಯಾರು ?
7) ನೌಕರನೊಬ್ಬನ ಮೇಲೆ ದೂರುಗಳು ಬಂದಾಗ ಅವನಿಂದ ವಿವರಣೆ ಕೇಳಿ ಮೇಲಾಧಿಕಾರಿ ಬರೆಯುವ ಪತ್ರದ ಹೆಸರೇನು ?
8) 'ಕಲ್ಲು ದೇವರು ಕರಗಲಿಲ್ಲ' ಕಥಾ ಸಂಕಲನದಿಂದ ಪಠ್ಯಕ್ಕೆ ಆಯ್ದುಕೊಳ್ಳಲಾದ ಕಥೆಯ ಹೆಸರೇನು ?

---